Reg. No. 

# BSCKAL 203/FNDKAL 203/ HRDKAL 203

**Credit Based Third Semester B.Sc./B.Sc.(FND)/B.A.(HRD) Degree Examination, October/November 2016**
**(Semester Scheme) (2014 – 15 Batch and Onwards)**
**KANNADA LANGUAGE (Paper – III)**

Time : 3 Hours Max. Marks : 80

## ಭಾಗ - 1
## (ಕಾವ್ಯ)

I. ಅ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : **(1×8 = 8)**

1) ವಟುವೇಷದ ಶಿವನಿಂದಾಗಿ ಪಾರ್ವತಿಯ ತಪಸ್ಸು ಭಂಗಗೊಂಡ ಬಗೆಯನ್ನು ಹರಿಹರ ಚಿತ್ರಿಸಿದ ಬಗೆ ಹೇಗೆ ? ವಿವರಿಸಿರಿ.

2) ಕಾವ್ಯ ಕಟ್ಟುವ ಸಂದರ್ಭದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ನಿಲುವುಗಳು ಬದಲಾಗಬೇಕಾದ ಅಗತ್ಯವನ್ನು 'ಗೊಬ್ಬರ' ಕವನದಲ್ಲಿ ಹೇಗೆ ನಿರೂಪಿಸಲಾಗಿದೆ ?

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(1×6 = 6)**

1) ರಾವಣ – ಶೂರ್ಪನಖಿಯರ ನಡುವೆ ನಡೆದ ಮಾತುಕತೆಯ ಸ್ವಾರಸ್ಯವನ್ನು ವಿವರಿಸಿರಿ.

2) 'ಮಾದ್ರಿಯ ಚಿತೆ' ಯಲ್ಲಿ ಮೂಡಿಬಂದ ಪಾಂಡು ಚಕ್ರವರ್ತಿಯ ಚಿತ್ರಣವನ್ನು ವಿವರಿಸಿರಿ.

ಇ) **ಒಂದಕ್ಕೆ** ಟಿಪ್ಪಣಿ ಬರೆಯಿರಿ : **(1×4 = 4)**

1) ಜನಪದ ಕವಯಿತ್ರಿ ಶ್ರೀಮತಿ ಬೋರಮ್ಮ.

2) ಚೆನ್ನಮಲ್ಲಿಕಾರ್ಜುನ.

P.T.O.

II. ಅ) **ಒಂದು** ಪದ್ಯಭಾಗದ ಭಾವ ಸ್ವಾರಸ್ಯವನ್ನು ವಿವರಿಸಿರಿ : **(1×5 = 5)**

1) ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳಾದೊಂದು ಮನ
ಆ ಮನ ನಿಮ್ಮಲ್ಲಿ ಒಡೆವೆರೆದ ಬಳಿಕ
ಎನಗೆ ಭಯವುಂಟೇ ಚೆನ್ನಮಲ್ಲಿಕಾರ್ಜುನಯ್ಯ.

2) ಇರಲಿ ಬಾ ಅವ್ವಯ್ಯ 'ಮೈಲಿಗೆ'ಯ ಕಳಚಿಬಿಡು
ಪುಣ್ಯವೋ ಪಾಪವೋ ಸಿಕ್ಕಷ್ಟು ಸೆಳೆದುಕೋ
'ಗುಂಪಿನಲಿ ಗೋವಿಂದ' ವಾಗಲು ಇಷ್ಟೇಕೆ ಚೌಕಾಸಿ
ಎಲ್ಲರೊಳಗೊಂದಾಗು ಇನ್ನು ಹತ್ತಿರವಾಗು
ಮುಟ್ಟು ಮುಟ್ಟು ಮೈದಡವು ಅಪ್ಪಿಕೋ
ಎಳೆ ಇಲ್ಲದನುಭೂತಿ ಅನುಭವಿಸು ಬಾ.

ಆ) **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಮಹತ್ವ ವಿವರಿಸಿ : **(2×4= 8)**

1) ಮಾಯದ ಸಂಸಾರದಲಿ ಸಿಲುಕಿದೆನು.

2) ಒಂಬತ್ತು ತಿಂಗಳಾದೊ ಒಂಬತ್ತು ದಿನನಾದೊ.

3) ಜವನ ಕೈಯ ಸೊಡರ ಬೆಳಗಲವಳ ಚಿತೆಯ ಕೆಂಡವು.

ಇ) **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(4×1 = 4)**

1) ಕುವೆಂಪು ಅವರ ಪೂರ್ಣ ಹೆಸರೇನು ?

2) ಪಾರ್ತಿಸುಬ್ಬನ ಊರು ಯಾವುದು ?

3) ಅಕ್ಕಮಹಾದೇವಿಯ ಲೌಕಿಕಗಂಡನ ಹೆಸರೇನು ?

4) ಹರಿಹರ ಶಿವಗಣಗಳ ಕುರಿತು ಬರೆದ ರಗಳೆಗಳ ಛಂದಸ್ಸಿನ ಹೆಸರೇನು ?

## ಭಾಗ - 2
## (ಕಾದಂಬರಿ)

III. ಅ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : **(1×8 = 8)**

1) 'ಬೆಟ್ಟ ಸಾಲುಮಳೆ' ಕಾದಂಬರಿಯಲ್ಲಿ ಶ್ರೇಣೀಕೃತ ಸಮಾಜದಲ್ಲಿ ಉಂಟಾಗುವ ಶೋಷಣೆಯ ಸೂಕ್ಷ್ಮತೆಯನ್ನು ಕಾದಂಬರಿಕಾರ ಹೇಗೆ ನೀಡಿದ್ದಾರೆ ? ನಿರೂಪಿಸಿ.

2) ಪುಟ್ಟಲಕ್ಷ್ಮಿ ಮತ್ತು ಕರಿತಿಮ್ಮ ಶೆಟ್ಟಿಯರ ಪ್ರೇಮ ಸಂಬಂಧವನ್ನು ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5 = 5)**

1) ಈರಣ್ಣ ಮತ್ತು ಪುಟ್ಟಲಕ್ಷ್ಮಿಯ ಮದುವೆಯ ಪ್ರಸ್ತಾಪ ಮುರಿದು ಬೀಳುವ ಬಗೆ ಹೇಗೆ ?

2) ಜಾತಿ–ಜಾತಿಗಳ ನಡುವಿನ ಕಂದಕವನ್ನು ಒಡೆಯುವ ಹಿನ್ನಲೆಯಲ್ಲಿ ಗಿರಿಜಾ ಮತ್ತು ಹೊನ್ನರ ಪಾತ್ರಗಳನ್ನು ವಿಶ್ಲೇಷಿಸಿರಿ.

ಇ) **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(2×1 = 2)**

1) ಬಸವಿಯಾಗಿದ್ದ ಈರಣ್ಣನ ಹೆಂಡತಿಯ ಹೆಸರೇನು ?

2) ಹೊನ್ನನ ಸಹಪಾಠಿ ಗೆಳತಿ ಯಾರು ?

## ಭಾಗ - 3
## (ಗದ್ಯಭಾಗ)

IV. ಅ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : **(1×8 = 8)**

1) ಧರ್ಮಗಳ ಕುರಿತಾಗಿ ನರಸಿಂಹಯ್ಯನವರ ವೈಚಾರಿಕ ನಿಲುವುಗಳನ್ನು ಚರ್ಚಿಸಿ.

2) ಹುಲಿಬೇಟೆಯ ಸಂದರ್ಭದ ವಿವರಗಳನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ ?

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5 = 5)**

1) ಖಾಸಗಿ ವಲಯದಲ್ಲಿ ಮೀಸಲಾತಿಯ ಅನಿವಾರ್ಯತೆಯನ್ನು ಲೇಖಕ ದೇವನೂರು ಅವರು ಹೇಗೆ ವಿವೇಚಿಸುತ್ತಾರೆ ?

2) ಅಜ್ಜಯ್ಯನ ಅಭ್ಯಂಜನದಲ್ಲಿ ಆಳುಗಳ ಪಾತ್ರವನ್ನು ಹೇಗೆ ನಿರೂಪಿಸಲಾಗಿದೆ ?

ಇ) **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(2×1 = 2)**

1) ಡಾ. ಎಚ್. ನಾಗವೇಣಿಯವರ ಹುಟ್ಟೂರು ಯಾವುದು ?

2) ಡಾ. ಎಚ್. ನರಸಿಂಹಯ್ಯನವರ ಆತ್ಮಕಥನದ ಹೆಸರೇನು ?

## ಭಾಗ - 4
## (ಕ್ರಿಯಾತ್ಮಕ ಕನ್ನಡ)

V. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : (1×8 = 8)

1) ಸಮೂಹ ಮಾಧ್ಯಮ ಎಂದರೇನು ? ಅದರ ವಿವಿಧ ಪ್ರಕಾರಗಳನ್ನು ವಿವರಿಸಿರಿ.

2) ಪತ್ರಿಕಾ ಸಂದರ್ಶನ ಎಂದರೇನು ? ಅದರ ತಯಾರಿ ಹೇಗಿರಬೇಕು ? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×5 = 5)

1) ಪತ್ರಿಕಾ ವರದಿಯ ಸ್ವರೂಪವನ್ನು ವಿವರಿಸಿ.

2) ಅಂಕಣಬರಹ ಎಂದರೇನು ? ವಿವರಿಸಿರಿ.

ಇ) ಒಂದು ವಾಕ್ಯದಲ್ಲಿ ಉತ್ತರಿಸಿರಿ : (2×1 = 2)

1) 'ಸುದ್ದಿ' ಎಂಬ ಶಬ್ದದ 'ಲ್ಯಾಟಿನ್' ಮೂಲಪದ ಯಾವುದು ?

2) ನೇಮಿಚಂದ್ರ ಅವರ ಅಂಕಣ ಬರಹದ ಹೆಸರೇನು ?

---